೨) ದೊಡ್ಡ ಗ್ರಾಮವಾದ ಇಲ್ಲಿಗೆ ಪ್ರೌಢಶಾಲೆ ಮಂಜೂರು ಮಾಡಲು ಸರ್ಕಾರಕ್ಕೆ ತೊಂದರೆಯೇನು?

೩) ಈ ಸಾಲಿನಲ್ಲಿ ಸದರಿ ಗ್ರಾಮಕ್ಕೆ ಪ್ರೌಢ ಶಾಲೆ ಮಂಜೂರು ಮಾಡಲಾಗುವುದೆ?

೪) ಈ ಸರ್ಕಾರಿ ಪ್ರೌಢಶಾಲೆಗೆ ಈಗಾಗಲೇ ಜಾಗಕೊಟ್ಟಿರುವುದು ನಿಜವೇ?

ಶ್ರೀ ಹೆಚ್ ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

೧ ಮತ್ತು ೨ ಈ ಗ್ರಾಮದಲ್ಲಿ ಒಂದು ಖಾಸಗಿ ಪ್ರೌಢಶಾಲೆ ನಡೆಯುತ್ತಿರುವುದರಿಂದ ಸರ್ಕಾರಿ ಪ್ರೌಢಶಾಲೆ ಅವಶ್ಯಕತೆ ಇರುವುದಿಲ್ಲವೆಂದು ಕಂಡುಬಂದಿದೆ.

೩) ಇಲ್ಲ.

೪) ಇಲ್ಲ.

ಹೆಚ್ಚುವರಿ ಶಿಕ್ಷಕರನ್ನು ಗುರುತಿಸುವುದು.

೧೪೨೦(೧೬೯೨)

ಶ್ರೀ ಕೆ.ಬಿ.ಮಲ್ಲಿಕಾರ್ಜುನ (ಬೀರೂರು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ ಬೇರೆ ಕಡೆಗೆ ವರ್ಗಾಯಿಸುತ್ತಿರುವುದು ನಿಜವೇ? ಹಾಗಿದ್ದಲ್ಲಿ ಹೆಚ್ಚುವರಿ ಉಪನ್ಯಾಸಕರುಗಳನ್ನು ಆಯಾಯ ಶಾಲೆಗಳಲ್ಲಿ ತನಿಖೆ ಮಾಡಿ ಗುರುತಿಸಲಾಗುತ್ತಿದೆಯೇ?

ಆ. ಶ್ರೀ ಲಕ್ಷ್ಮೀಶ ಸಂಯುಕ್ತ ಪದವಿ ಪೂರ್ವ ಕಾಲೇಜು ದೇವನೂರು, ಕಡೂರು ತಾಲ್ಲೂಕು, ಚಿಕ್ಕಮಗಳೂರು-ಜಿಲ್ಲೆಯಲ್ಲಿ ಹೆಚ್ಚುವರಿ ಉಪನ್ಯಾಸಕರನ್ನು ಗುರುತಿಸುವಾಗ: ಜೇಷ್ಠತೆ ಮತ್ತು ಅಂಗವಿಕಲತೆಯನ್ನು ಪರಿಗಣಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ. ಅಂಗವಿಕಲತೆಯ ಹಾಗೂ ಬೋಧನೆ ಮಾಡದಿರುವ ಉಪನ್ಯಾಸಕರನ್ನು ಮುಂದುವರಿಸುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲವೆ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ಮಾನದಂಡವೇನು?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ. ಹೌದು. ಆಯಾ ಜಿಲ್ಲಾ ಉಪ ನಿರ್ದೇಶಕರುಗಳಿಂದ ಹಾಗೂ ಇಲಾಖಾ ಅಧಿಕಾರಿಗಳನ್ನು ಕಳುಹಿಸಿ ವರದಿ ತರಿಸಿಕೊಂಡು ಅದರ ಆಧಾರದ ಮೇಲೆ ಹೆಚ್ಚುವರಿ ಉಪನ್ಯಾಸಕರನ್ನು ಗುರುತಿಸಿ ಸ್ಥಳಾಂತರಿಸಲಾಗುತ್ತಿದೆ.

ಆ. ಉಪನ್ಯಾಸಕರ ಅಂಗವಿಕಲತೆಯ ಬಗ್ಗೆ ಗಮನಕ್ಕೆ ಬಂದಿರುವುದಿಲ್ಲ. ಕನ್ನಡ ಬೋಧಿಸುವ ಉಪನ್ಯಾಸಕರು ಒಬ್ಬರೆ ಇರುವುದರಿಂದ ಜೇಷ್ಠತೆಯ ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಅಂಗವಿಕಲತೆ ಇರುವುದು ಪ್ರಾಚಾರ್ಯರಿಗೆ. ಉಪನ್ಯಾಸಕರಿಗಲ್ಲ. ಆದ್ದರಿಂದ ವಿದ್ಯಾರ್ಥಿಗಳ ಬೋಧನೆಗೆ ತೊಂದರೆಯಾಗಿರುವುದಿಲ್ಲ.

ಹೊಸ ಪ್ರೌಢಶಾಲೆ ಮತ್ತು ಕಿರಿಯ ಕಾಲೇಜು ಪ್ರಾರಂಭಿಸುವುದು.

೧೪೨೧(೧೬೯೪)

ಶ್ರೀ ಕೆ.ಬಿ.ಮಲ್ಲಿಕಾರ್ಜುನ (ಬೀರೂರು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ೨೦೦೧-೦೨ನೇ ಸಾಲಿನಲ್ಲಿ ಹೊಸ ಪ್ರೌಢಶಾಲೆಗಳನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

೨) ೨೦೦೧-೦೨ನೇ ಸಾಲಿನಲ್ಲಿ ಹೊಸ ಕಿರಿಯ ಕಾಲೇಜುಗಳನ್ನು ಪ್ರಾರಂಭಿಸುವ ಯೋಜನೆ ಸರ್ಕಾರಕ್ಕೆ ಇದೆಯೇ?

೩) ಹಾಗಿದ್ದಲ್ಲಿ ಚಿಕ್ಕಮಗಳೂರು ಜಿಲ್ಲೆ ಬೀರೂರು ಕ್ಷೇತ್ರದ ಕಳಸಾಪುರ ಮತ್ತು ಜೋಡಿಹೋಚಿಹಳ್ಳಿಯಲ್ಲಿ ಕಾಲೇಜು ಪ್ರಾರಂಭಿಸುವ ಉದ್ದೇಶ ಸರ್ಕಾರದ ಯೋಜನೆಯಲ್ಲಿದೆಯೇ?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

೧) ಈ ವಿಷಯವು ಪರಿಶೀಲನೆಯಲ್ಲಿದೆ.

೨) ಇಲ್ಲ